# ಮೈಕ್ರೊಸಾಫ್ಟ್‌ಗೆ ಪರ್ಯಾಯ WPS




ಮೈಕ್ರೊಸಾಫ್ಟ್ ಕಂಪನಿ ಎಂದಕೂಡಲೇ ಕಣ್ಮುಂದೆ ಬರುವುದೇ ಎಂ.ಎಸ್. ಆಫೀಸ್, ಎಂ.ಎಸ್. ವರ್ಡ್, ಎಂ.ಎಸ್. ಎಕ್ಸೆಲ್ ಇತ್ಯಾದಿ ಸಾಫ್ಟ್‌ವೇರ್‌ಗಳು. ಬರವಣಿಗೆ, ದತ್ತಾಂಶ ದಾಖಲೆಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಸರಳೀಕರಣಗೊಳಿಸಲು ನೆರವಾದ ಈ ತಂತ್ರಾಂಶಗಳಿಗೆ ಪರ್ಯಾಯ ತಂತ್ರಾಂಶಗಳೇ ಇಲ್ಲ ಎನ್ನುವ ಕಾಲವೊಂದಿತ್ತು. ಈಗ ಕಾಲ ಬದಲಾಗಿದೆ. ಮೈಕ್ರೊಸಾಫ್ಟ್‌ಗೆ ಸೆಡ್ಡು ಹೊಡೆಯಲು ಎಂ.ಎಸ್. ಆಫೀಸ್, ಎಂ.ಎಸ್. ವರ್ಡ್, ಎಂ.ಎಸ್. ಎಕ್ಸೆಲ್ ಇತ್ಯಾದಿ ಸಾಫ್ಟ್‌ವೇರ್‌ಗಳಿಗೆ ಪರ್ಯಾಯವಾಗಿ ಚೀನಾದ ಕಿಂಗ್‌ಸಾಫ್ಟ್ ಕಂಪನಿಯು 'ಡಬ್ಲ್ಯೂಪಿಎಸ್ ಆಫೀಸ್ 2020' ಎಂಬ ಸಾಫ್ಟ್‌ವೇರ್ ಅನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಇದರಲ್ಲಿ ರೈಟರ್, ಸ್ಪ್ರೆಡ್‌ಶೀಟ್ ಹಾಗೂ ಪ್ರಸೆಂಟೇಷನ್ ಉಪ ಸಾಫ್ಟ್‌ವೇರ್‌ಗಳು ಲಭ್ಯ. ಈ ಸಾಫ್ಟ್‌ವೇರ್ ಅನ್ನು ಮೈಕ್ರೊಸಾಫ್ಟ್‌ನ ಎಂ.ಎಸ್. ಆಫೀಸ್, ಎಂ.ಎಸ್. ವರ್ಡ್, ಎಂ.ಎಸ್. ಎಕ್ಸೆಲ್ ಸಾಫ್ಟ್‌ವೇರ್‌ಗಳಂತೆ ಉಚಿತವಾಗಿ ಬಳಕೆ ಮಾಡಲು ಆ ಕಂಪನಿಯು ಅವಕಾಶ ಕಲ್ಪಿಸಿದೆ.

ಸಾಫ್ಟ್‌ವೇರ್ ಮತ್ತು ಅದಕ್ಕೆ ಸಂಬಂಧಿಸಿದ ಪರಿಹಾರ ಸೇವೆಗಳನ್ನು ಒದಗಿಸುತ್ತಿರುವ ಕಿಂಗ್‌ಸಾಫ್ಟ್ ಕಂಪನಿಯು 'ಡಬ್ಲ್ಯೂಪಿಎಸ್ ಆಫೀಸ್ 2020' ಉಚಿತವಾಗಿ ಜಾಗತಿಕ ಮಾರುಕಟ್ಟೆಗೆ ಈಚೆಗೆ ಪರಿಚಯಿಸಿತ್ತು. ಅದೇ ಸಾಫ್ಟ್‌ವೇರ್ ಅನ್ನು ಭಾರತಕ್ಕೂ ಈಗ ಪರಿಚಯಿಸಲಾಗಿದೆ.

ಭಾರತದಲ್ಲಿ ಪರಿಚಯಿಸಿರುವ ಆ ಸಾಫ್ಟ್‌ವೇರ್ ಅಂತರರಾಷ್ಟ್ರೀಯ ಮಟ್ಟದ ಆವೃತ್ತಿಯಾಗಿದ್ದು, ಆಲ್ ಇನ್ ಒನ್ ಸಾಫ್ಟ್‌ವೇರ್ ಇದಾಗಿದೆ. ಈ ಸಾಫ್ಟ್‌ವೇರ್ ಅನ್ನು ದೇಶದಲ್ಲಿ ಈಗಾಗಲೇ 23 ದಶಲಕ್ಷ ಮಂದಿ ಮಾಸಿಕ ಸಕ್ರಿಯ ಬಳಕೆದಾರರು ಡೌನ್‌ಲೋಡ್ ಮಾಡಿಕೊಂಡು ಬಳಸುತ್ತಿದ್ದಾರೆ.

ವಿಶ್ವದಾದ್ಯಂತ ಕಿಂಗ್‌ಸಾಫ್ಟ್ ಆಫೀಸ್, 310 ದಶಲಕ್ಷ ಮಂದಿಗೆ ವೈಯಕ್ತಿಕ, ಉದ್ಯಮಗಳು ಮತ್ತು ಸರ್ಕಾರಿ ಸಂಸ್ಥೆಗಳ ಎಂಎಯುಗಳು ಸೇರಿದಂತೆ 200 ದೇಶಗಳಲ್ಲಿ ಈ ಸಾಫ್ಟ್‌ವೇರ್ ಸೇವೆಯನ್ನು ಒದಗಿಸಿದೆ. ವಿಂಡೋಸ್, ಆ್ಯಂಡ್ರಾಯ್ಡ್, ಈಒಎಸ್, ಲಿನಕ್ಸ್ ಮತ್ತು ಇದೇ ಮೊದಲ ಬಾರಿಗೆ ಎಂಎಸಿಒಎಸ್‌ಗಳನ್ನು ತಯಾರಿಸುತ್ತಿರುವ 'ಡಬ್ಲ್ಯೂಪಿಎಸ್ ಆಫೀಸ್ 2020' ಮಾರುಕಟ್ಟೆಯ ಪೈಪೋಟಿಯನ್ನು ಸಮರ್ಥವಾಗಿ ಎದುರಿಸುತ್ತಿದೆ. ಇದರ ಒನ್‌ಸ್ವಾಪ್ ಆಫೀಸ್ ಉಚಿತ ಮತ್ತು ಪ್ರೀಮಿಯಂ ಆವೃತ್ತಿಗಳಲ್ಲಿ ಲಭ್ಯವಿದೆ.

ನೂತನ ಸಾಫ್ಟ್‌ವೇರ್ ಅನ್ನು ಹೊಸ ಪೀಳಿಗೆಯ ವೃತ್ತಿಪರರು, ವಿದ್ಯಾರ್ಥಿಗಳು ಮತ್ತು ಫ್ರೀ ಲ್ಯಾನ್ಸರ್‌ಗಳಿಗೆ ಅಗತ್ಯವೆನಿಸುವ ಟೂಲ್‌ಗಳನ್ನು ಗುರುತಿಸಿ ಅವುಗಳನ್ನು ನೀಡುವ ನಿಟ್ಟಿನಲ್ಲಿ ರೂಪಿಸಲಾಗಿದೆ. ಎಂಎಸಿಒಎಸ್ ಡಿವೈಸ್‌ಗಳು ಮಾರುಕಟ್ಟೆಯಲ್ಲಿರುವ ಇತರೆ ಸೂಟ್‌ಗಳಿಂದ ಸಾಕಷ್ಟು ಸವಾಲುಗಳನ್ನು ಎದುರಿಸುವಂತಾಗಿತ್ತು. ಹೀಗಾಗಿ, ಆ್ಯಪಲ್/ಎಂಎಸಿಒಎಸ್ ಡಿವೈಸ್‌ಗಳು ತಡೆರಹಿತವಾಗಿ ಕಾರ್ಯನಿರ್ವಹಿಸುವಂತೆ ಈ ಸಾಫ್ಟ್‌ವೇರ್ ಅನ್ನು ರೂಪಿಸಲಾಗಿದೆ.

ಡಿವೈಸ್‌ಗಳ ಮೇಲೆ ಈ ಡಬ್ಲ್ಯೂಪಿಎಸ್ ಆಫೀಸ್ ಅತ್ಯಂತ ಹಗುರವಾಗಿದ್ದು, ಎಲ್ಲಾ ಇತ್ತೀಚಿನ ಆಫೀಸ್ ಮಾದರಿಗಳು, ಸಪೋರ್ಟರ್‌ಗಳು ಸೇರಿದಂತೆ ಇನ್ನಿತರೆ ವಿಶೇಷಗಳನ್ನು ಒಳಗೊಂಡಿದೆ. ಎಲ್ಲಾ ಮುಖ್ಯವಾಹಿನಿಯ ಆಪರೇಟಿಂಗ್ ಸಿಸ್ಟಮ್‌ಗಳು, ಮ್ಯಾಕ್, ವಿಂಡೋಸ್, ಲಿನಸ್, ಐಒಎಸ್ ಮತ್ತು ಆ್ಯಂಡ್ರಾಯ್ಡ್ ಆಧಾರಿತ ಡಿವೈಸ್‌ಗಳಿಗೆ ಸುಲಭವಾಗಿ ಹೊಂದುತ್ತದೆ.



ಡಬ್ಲ್ಯೂಪಿಎಸ್ ಅಂತರರಾಷ್ಟ್ರೀಯ ವ್ಯವಹಾರದ ಮುಖ್ಯಸ್ಥ ಬಿಲ್ಲಿ ಚೆಂಗ್ – 'ಕೆಲಸದ ಸ್ಥಳಗಳು ಮತ್ತು ಸಿಬ್ಬಂದಿಯ ಕಾರ್ಯಗಳು ದಿನದಿಂದ ದಿನಕ್ಕೆ ವಿಕಸನಗೊಳ್ಳುತ್ತಿವೆ. ಈ ಯುಗದಲ್ಲಿ ನಮಗೆ ಶಕ್ತಿಶಾಲಿಯಾದ, ಇನ್ನೂ ಸರಳವಾದ, ಗ್ರಾಹಕಸ್ನೇಹಿಯಾದ ಮತ್ತು ತಡೆರಹಿತ ತಂತ್ರಾಂಶ ಟೂಲ್‌ಗಳ ಅಗತ್ಯವಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಈ 'ಡಬ್ಲ್ಯೂಪಿಎಸ್ ಆಫೀಸ್ 2020' ಅನ್ನು ಅಭಿವೃದ್ಧಿಪಡಿಸಲಾಗಿದೆ. ಸಾಂಪ್ರದಾಯಿಕ ವಿಧಾನಗಳಿಂದ ಮುಕ್ತವಾಗಿ ಹೊಸತನ ಹಾಗೂ ಹೊಸ ಅವಕಾಶಗಳನ್ನು ರೂಪಿಸುವುದನ್ನು ಇದು ಪ್ರತಿನಿಧಿಸುತ್ತದೆ' ಎಂದು ಹೇಳಿದ್ದಾರೆ. ಈ ಸಾಫ್ಟ್‌ವೇರ್ ಆನ್‌ಲೈನ್‌ನಲ್ಲಿ ಲಭ್ಯವಿದ್ದು, ಲಾಗಿನ್ ಆಗುವುದರ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

## ಸಾಫ್ಟ್‌ವೇರ್ ವಿಶೇಷತೆ

ಆಲ್ ಇನ್ ಒನ್ ಟ್ಯಾಬ್ ಸ್ಟೈಲ್ ಇಂಟರ್‌ಫೇಸ್, ಕ್ರಾಸ್ ಡಿವೈಸ್ ಸಿಂಕ್ರೊನೈಜೇಷನ್, ಸಾವಿರಾರು ಟೆಂಪ್ಲೇಟ್‌ಗಳು, ಪಿಡಿಎಫ್ ಟು ವರ್ಡ್, ಫೈಲ್ ರಿಪೇರ್, ಪಿಕ್ಚರ್ ಟು ಟೆಕ್ಸ್ಟ್, ಕ್ಲೌಡ್ ಇಂಟಿಗ್ರೇಷನ್, ಬ್ಯಾಕ್ ಅಪ್ ಸೆಂಟರ್ ಹಾಗೂ ಇನ್ನಿತರ ತಂತ್ರಾಂಶ ಸೌಲಭ್ಯಗಳಿವೆ.

ಮ್ಯಾಕ್ ಒಎಸ್‌ಗಾಗಿ ವಿಶೇಷ ಆವೃತ್ತಿಯನ್ನು ಸಿದ್ಧಪಡಿಸಿದ್ದು, ಇದು ಎಲ್ಲ ಮಾದರಿಯ ಡಿವೈಸ್‌ಗಳು ಹಾಗೂ ತಂತ್ರಾಂಶಗಳ ಜೊತೆಗೆ ಸುಲಭವಾಗಿ ಕಾರ್ಯನಿರ್ವಹಿಸುತ್ತದೆ. ಡಾರ್ಕ್ ಮೋಡ್ ನೆರವಾಗುವ ಈ ಸಾಫ್ಟ್‌ವೇರ್ ಕ್ಲೌಡ್ ಬ್ಯಾಕ್ ಅಪ್ ಹಾಗೂ ಬಹು ಡಿವೈಸ್‌ಗಳ ಜೊತೆಗೆ ಸಹಕರಿಸುತ್ತದೆ. ಇದರಲ್ಲೂ ಸಹ ಕ್ರಾಸ್ ಡಿವೈಸ್ ಸಿಂಕ್ರೊನೈಜೇಷನ್ ಹಾಗೂ ಸಾವಿರಾರು ಟೆಂಪ್ಲೇಟ್ಸ್‌ಗಳ ಸೌಲಭ್ಯವಿದೆ.

■ ಸಿರಿ